## ಸುದ್ದಿಸಂಚಯ

### ಬೃಂದಾವನದ ರಾಮಕೃಷ್ಣ ಸೇವಾಶ್ರಮದ ಶತಮಾನೋತ್ಸವ

ಬೃಂದಾವನ



ಬೃಂದಾವನ ಪರಿಕ್ರಮ



ವಿಶೇಷಸಂಚಿಕೆಯ ಬಿಡುಗಡೆ

ಶ್ರೀಕೃಷ್ಣನ ಸ್ಮರಣೆಯಿಂದ ಪಾವನವಾದ ಬೃಂದಾವನ ಧಾಮದಲ್ಲಿ ರಾಮಕೃಷ್ಣ ಮಿಷನ್ ಸೇವಾಶ್ರಮವು ವೈದ್ಯಕೀಯ ಸೇವೆಯನ್ನು ಕಳೆದ ನೂರು ವರ್ಷಗಳಿಂದ ಮಾಡುತ್ತ ಬಂದಿದೆ. ಆಶ್ರಮದ ಶತಮಾನೋತ್ಸವ ಸಮಾರೋಪ ಸಮಾರಂಭವು ಜನವರಿ ೧೧ ರಿಂದ ೧೪ ರವರೆಗೆ ವಿಜೃಂಭಣೆಯಿಂದ ನಡೆಯಿತು. ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್, ಉಪಾಧ್ಯಕ್ಷರಲ್ಲಿ ಒಬ್ಬರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಮತ್ತು ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಸ್ವಾಮಿ ಪ್ರಭಾನಂದಜಿ ಮಹಾರಾಜ್– ಈ ಹಿರಿಯ ಯತಿಗಳ ದಿವ್ಯ ಸಾನ್ನಿಧ್ಯ ಮತ್ತು ೧೮೦ ಸಾಧುಗಳು ಮತ್ತು ೧೫೦೦ ಭಕ್ತರ ಉಪಸ್ಥಿತಿ, ಕಾರ್ಯಕ್ರಮಗಳಿಗೆ ಶೋಭೆಯನ್ನು ತಂದುಕೊಟ್ಟಿತ್ತು.



ಸ್ವಾಮಿ ವಿವೇಕಾನಂದರ ಪ್ರತಿಮೆ

ದಿನಾಂಕ ೧೧.೦೧.೨೦೦೮ ರಂದು ಬೃಂದಾವನ ಪರಿಕ್ರಮ ನಡೆಯಿತು. ಅನೇಕ ಸಾಧುಗಳು ಮತ್ತು ಭಕ್ತರು ಅದರಲ್ಲಿ ಭಾಗವಹಿಸಿದ್ದರು. ೧೨.೦೧.೨೦೦೮ ರಂದು ಶ್ರೀರಾಮಕೃಷ್ಣರಿಗೆ ವಿಶೇಷಪೂಜೆಯನ್ನು ಸಮರ್ಪಿಸಲಾಯಿತು. ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು ಸ್ವಾಮಿ ವಿವೇಕಾನಂದರ ಭವ್ಯ ಪುತ್ಥಳಿಯನ್ನು ಅನಾವರಣ ಮಾಡಿದರು. ಅಂದು ನಡೆದ ಸಾರ್ವಜನಿಕ ಸಮಾರಂಭವು ಸ್ವಾಮಿ ವಿವೇಕಾನಂದರ ಸ್ಮರಣೆಗೆ ಮೀಸಲಾಗಿತ್ತು. ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜ್ ಅವರು ಅಧಿಕೃತವಾಗಿ ಕಾರ್ಯಕ್ರಮಗಳನ್ನು ಉದ್ಘಾಟಿಸಿ, ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಅಂದಿನ ದಿನ ನಡೆದ ಇನ್ನೊಂದು ಸಭೆಯಲ್ಲಿ, ಸಮಾರಂಭದ ಸ್ಮರಣೆಗೆ ಹೊರತರಲಾದ ವಿಶೇಷ ಅಂಚೆಚೀಟಿಯನ್ನು ಬಿಡುಗಡೆ ಮಾಡಲಾಯಿತು. ಸಂಜೆ ಬೃಂದಾವನದ ರಾಮಕೇತನ್‌ಜಿ ಮಹಾರಾಜ್ ಅವರಿಂದ ಭಾಗವತ ಪಠಣ ಮತ್ತು ಪುಣೆಯ ಪಂಡಿತ್ ಶ್ರೀಕುಮಾರ್ ಮರ್ದೂರ್ ಅವರಿಂದ ಶಾಸ್ತ್ರೀಯ ಸಂಗೀತ ಗಾಯನ ಕಾರ್ಯಕ್ರಮಗಳು ಜರುಗಿದವು.

೧೩.೦೧.೨೦೦೮ ರಂದು ಬೆಳಗ್ಗೆ ಕೊಲ್ಕತಾದ ಶ್ರೀ ಕುಶಾಲ್ ದಾಸ್ ಅವರಿಂದ ಸಿತಾರ್ ವಾದನ ಕಾರ್ಯಕ್ರಮವಿತ್ತು. ಸುಮಾರು ೧೦೦೦ ಬಡ ವಿಧವೆಯರಿಗೆ ಕಂಬಳಿಗಳನ್ನು ವಿತರಿಸಲಾಯಿತು. ಮಧ್ಯಾಹ್ನದ ಸಮಾರಂಭದ ಅಧ್ಯಕ್ಷತೆಯನ್ನು ಪರಮಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ವಹಿಸಿದ್ದರು. ಅದರಲ್ಲಿ ಶ್ರೀಮಾತೆ ಶಾರದಾದೇವಿಯವರ ಸಂಸ್ಮರಣೆಯನ್ನು ಭಾಷಣಕಾರರು ಮಾಡಿದರು. ಸಂಜೆ ಆಶ್ರಮದ ಆಸ್ಪತ್ರೆಯಲ್ಲಿರುವ ಒಳರೋಗಿಗಳಿಗೆ 'ರೋಗಿನಾರಾಯಣ' ಪೂಜೆಯನ್ನು ಮಾಡಲಾಯಿತು. ಅವರನ್ನು ಗಂಧ, ಹೂವು, ಹಣ್ಣು ಮತ್ತು ಸಿಹಿತಿಂಡಿಗಳಿಂದ ಪೂಜಿಸಲಾಯಿತು. ಅಂದಿನ ದಿನದ ಕಾರ್ಯಕ್ರಮಗಳು ಶ್ರೀರಾಮಕೃಷ್ಣ ಲೀಲಾಗೀತಿ ಮತ್ತು ಹೈದರಾಬಾದಿನ ಕಲಾಕೃಷ್ಣ ತಂಡದವರ ಶಿವ ಮತ್ತು ಕೃಷ್ಣ ತಾಂಡವ ನೃತ್ಯದಿಂದ ಕೊನೆಗೊಂಡಿತು.

೧೪.೦೧.೨೦೦೮ ರಂದು ಬೆಳಗ್ಗೆ ಸಂಕೀರ್ತನೆ ನಡೆಯಿತು. ಶ್ರೀಮತ್ ಸ್ವಾಮಿ ಪ್ರಭಾನಂದಜಿ ಅವರು ಅಧ್ಯಕ್ಷತೆ ವಹಿಸಿದ್ದ ಸಾರ್ವಜನಿಕ ಸಮಾರಂಭದಲ್ಲಿ, ಹಲವಾರು ಭಾಷಣಕಾರರು ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳ ಮಹತ್ವದ ಬಗ್ಗೆ ತಿಳಿಸಿದರು. ಸಂಜೆ ಬೃಂದಾವನ ಸೇವಾಶ್ರಮದ ಚಟುವಟಿಕೆಗಳ ಬಗ್ಗೆ ಸಿ.ಡಿ. ಪ್ರದರ್ಶನ ನಡೆಯಿತು. ಕಡೆಯದಾಗಿ, ಬೃಂದಾವನದ ನಿಕುಂಜ ರಾಸಲೀಲಾ ಮಂಡಲ್ ಅವರಿಂದ ರಾಸಲೀಲೆಯ ನಾಟಕ ಪ್ರದರ್ಶನ ಇತ್ತು. ಅದು ಕೃಷ್ಣನ ಬಾಲಲೀಲೆಯನ್ನು ನೋಡುಗರ ಕಣ್ಣ ಮುಂದೆ ತರಿಸಿತು. ಹೀಗೆ ಶತಮಾನೋತ್ಸವ ಸಮಾರಂಭವು ಅರ್ಥಪೂರ್ಣವಾಗಿ ಸುಸಂಪನ್ನಗೊಂಡಿತು.

### ಕನ್ನಡನಾಡಿನಲ್ಲಿ ರಾಮಕೃಷ್ಣ ಸಂಘದ ಮುನ್ನಡೆ

ಬೆಂಗಳೂರು, ಬಸವನಗುಡಿ


**ಬೆಂಗಳೂರು ಬಸವನಗುಡಿಯ ರಾಮಕೃಷ್ಣ ಮಠದ ವಾರ್ಷಿಕೋತ್ಸವವು ದಿನಾಂಕ ೧.೧. ೨೦೦೮ ರ ಕಲ್ಪತರು ದಿನದಂದು, ಪರಮಪೂಜ್ಯ ಶ್ರೀಮತ್ ಸ್ವಾಮಿ ಹರ್ಷಾನಂದಜಿ ಮಹಾರಾಜ್ ಅವರ ನೇತೃತ್ವದಲ್ಲಿ ನಡೆದ ಸತ್ಸಂಗ ಕಾರ್ಯಕ್ರಮದ ಮೂಲಕ ಶುಭಾರಂಭಗೊಂಡಿತು.** ೨.೧.೨೦೦೮ ರಂದು **ವಿವೇಕಾನಂದ ಬಾಲಕಸಂಘ ಮತ್ತು ಯುವಕಸಂಘದ ವಾರ್ಷಿಕೋತ್ಸವ** ನಡೆಯಿತು. ೪.೧.೨೦೦೮ ರಂದು ನಡೆದ **ಶ್ರೀಶಾರದಾದೇವಿ ಸಂಸ್ಮರಣ ಸಮಾರಂಭದಲ್ಲಿ** ಸ್ವಾಮಿ ನಿತ್ಯಸ್ಥಾನಂದಜಿ ಮತ್ತು ಶ್ರೀಮತಿ ಕೆ.ಎಸ್.ಚಂದ್ರಾ ಭಾಗವಹಿಸಿದ್ದರು. ೫.೧.೨೦೦೮ ರಂದು ನಡೆದ **ಸ್ವಾಮಿ ವಿವೇಕಾನಂದ ಸಂಸ್ಮರಣ ಸಮಾರಂಭದಲ್ಲಿ** ಸ್ವಾಮಿ ಅನುಪಮಾನಂದಜಿ ಮತ್ತು ಶ್ರೀ ಸೂಲಿಬೆಲೆ ಚಕ್ರವರ್ತಿ ಭಾಷಣ ಮಾಡಿದರು. ೬.೧.೨೦೦೮ ರ **ಶ್ರೀರಾಮಕೃಷ್ಣ ಸಂಸ್ಮರಣ ಸಮಾರಂಭದಲ್ಲಿ,** ಸ್ವಾಮಿ ರಾಘವೇಶಾನಂದಜಿ ಮತ್ತು ಬೇಲಿಮಠದ ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಸ್ವಾಮೀಜಿ ಪ್ರವಚನ ಮಾಡಿದರು. ಕಡೆಯ ಮೂರು ದಿನಗಳಂದು ಕ್ರಮವಾಗಿ, ಬೆಂಗಳೂರಿನ ಯಕ್ಷಸಂಪದದವರಿಂದ **'ರಾಮದರ್ಶನ'** ಎಂಬ ಯಕ್ಷಗಾನ, ವಿದ್ವಾನ್ ವಿಶ್ವನಾಥ ನಾಕೋಡ್ ಅವರ **ಸುಗಮ ಸಂಗೀತ** ಮತ್ತು **'ಭಕ್ತಪ್ರಹ್ಲಾದ'** ಎಂಬ ತೆಲುಗು ಚಲನಚಿತ್ರ ಪ್ರದರ್ಶನಗಳು ನಡೆದವು. ೧೨.೧.೨೦೦೮ ರಂದು ನಡೆದ ರಾಷ್ಟ್ರೀಯ ಯುವ ದಿನ ಸಮಾರಂಭದಲ್ಲಿ ರಾಜ್ಯಪಾಲ ರಾಮೇಶ್ವರ ಠಾಕೂರ್ ಭಾಗವಹಿಸಿದ್ದರು.



ಸ್ವಾಮಿ ಪ್ರಭಾನಂದಜಿ ಅವರಿಂದ ಪುಸ್ತಕಪ್ರದರ್ಶನ ಉದ್ಘಾಟನೆ



ಯುವದಿನಾಚರಣೆಯಲ್ಲಿ ಪರಮಪೂ... ಸ್ವಾಮಿ ಹರ್ಷಾನಂದಜಿ ಮತ್ತು ರಾಜ್ಯಪಾಲರ...



ವಿವೇಕಾನಂದ ಬಾಲಕಸಂಘದ ಮಕ್ಕಳಿಂದ ಭಜನೆ